ಯುವತಿ ಗಮನ ಸೆಳೆದಳು. ರಾಖಿಯ ಆಪ್ತ ಸ್ನೇಹಿತೆ ಸಾಯಿರಾ! ಬಹುಶಃ ಮುಹೂರ್ತಕ್ಕೆ ವೇಳೆಯಿದ್ದಂತಿತ್ತು. ಅಷ್ಟರಲ್ಲಿ ಮಹಿಳೆಯೊಬ್ಬಳು ಆತುರದಿಂದ ನಮ್ಮತ್ತ ಧಾವಿಸಿ ಬಂದಳು. ಆಕೆಯ ಮೊಗದಲ್ಲಿ ಆತಂಕ.

"ಸಾರ್, ನೆಕ್ಲೇಸ್ ಸಿಕ್ಕಿತೇ?" ಚಿಮ್ಮಿ ಬಂತು ಪ್ರಶ್ನೆ.

"ಅಷ್ಟು ಸುಲಭದಲ್ಲಿ ಸಿಗೋಕೆ ಕಳ್ಳನೇನು ಎಲ್ಲಿಟ್ಟಿದ್ದೇನೆ ಅಂತ ಹೇಳಿ ಹೋಗಿದ್ದಾನೆಯೇ? ಇವರು ಹುಡುಕ್ತಾ ಇರೋದು ಕಾಣ್ಸಿಲ್ಲೇನು? ಇವ್ಳು ನನ್ ಹೆಂಡ್ತಿ ನಾಗಮ್ಮ, ಸಾರ್. ಇವಳಿಗೆ ಆತುರ ಜಾಸ್ತಿ." ಪೂವಯ್ಯ ಹೆಂಡತಿಯನ್ನು ಆಕ್ಷೇಪಿಸಿದ.

"ಇನ್ನು ಮುಕ್ಕಾಲು ಗಂಟೆಯಲ್ಲಿ ಮುಹೂರ್ತ. ಅಷ್ಟರೊಳಗೆ ಸಿಗದಿದ್ರೆ ಏನ್ ಮಾಡೋದು?" ಆತಂಕದ ನುಡಿ.

"ಅದು ಇಲ್ಲದೇ ಮದುವೆ ಆಗೋದಿಲ್ಲೇನು?"

"ನೋಡಿ, ಮದುಮಗಳು ಸೀರೆ ಬದಲಾಯಿಸೋಕೆ ಹೊರಟಾಯಿತು."

ಮದುವಣಗಿತ್ತಿ ರಾಖಿ, ಸಾಯಿರಾ ಮತ್ತಿತರ ಹೆಂಗಸರ ಗುಂಪು ಮಹಡಿಯತ್ತ ಚಲಿಸಿತು. ನಾಗಮ್ಮನೂ ಅವರ ಹಿಂದೆ ಹೆಜ್ಜೆ ಹಾಕಿದಳು. ಯಾರನ್ನೋ ಮಾತನಾಡಿಸಲು ಪೂವಯ್ಯ ವೇದಿಕೆಯತ್ತ ನಡೆದ. ನಾವು ವಾಶ್ ರೂಮು ಹಾದು, ಹಿಂಬಾಗಿಲಿನತ್ತ ಸರಿದಾಗ, ಏರು ಕಂಠದಲ್ಲಿ ಮಾತುಗಳು ತೂರಿ ಬಂದವು. ಹೊರಬಂದು ಇಣುಕಿದಾಗ, ಕಾರೊಂದರ ಚಾಲಕ ಮತ್ತು ಬೈಕ್ ಸವಾರನೊಬ್ಬನ ನಡುವೆ ವಾಗ್ಯುದ್ಧ. ತನ್ನ ಕಾರಿಗೆ ಅಡ್ಡವಾಗಿ ಬೈಕ್ ನಿಲ್ಲಿಸಿದ್ದಕ್ಕೆ ಆಕ್ಷೇಪಿಸಿ, ಕಾರು ಚಾಲಕ ಬೈಕ್ ಸವಾರನನ್ನು ತರಾಟೆಗೆ ತೆಗೆದುಕೊಂಡಿದ್ದ. ತಾನು ಅರ್ಧ ಗಂಟೆಯಲ್ಲಿ ಹೋಗುವುದಾಗಿ, ಬೈಕ್ ಸವಾರ ಹೇಳಿದರೂ, ಕಾರು ಚಾಲಕನದ್ದು ಬೇರೆಯದೇ ವಾದ. ತನಗೆ ಈಗಲೇ ಹೋಗಲಿಕ್ಕಿದ್ದು, ಬೈಕನ್ನು ಇಲ್ಲಿ ನಿಲ್ಲಿಸಬೇಡ ಎಂದು ಗಟ್ಟಿಯಾಗಿ ಹೇಳುತ್ತಿದ್ದ. ಅಷ್ಟರಲ್ಲಿ ಸೆಕ್ಯುರಿಟಿ ಬಂದು, ಅವರ ಜಗಳ ಬಿಡಿಸತೊಡಗಿದ. ನಾವು ಪರಿಶೀಲನೆಯನ್ನು ಮುಂದುವರೆಸಿದೆವು.

ಬಾಲ್ಕನಿಯ ಕೆಳಗೆ ಒಂದಷ್ಟು ಹೆಜ್ಜೆ ಗುರುತುಗಳಿದ್ದವು. ಕರಮಚಂದ್ರ ಭೂತಗನ್ನಡಿಯಿಂದ ಅವುಗಳನ್ನು ಪರೀಕ್ಷಿಸತೊಡಗಿದ. ಅ ಭಾಗದಲ್ಲಿ ಹೆಚ್ಚು ಮಂದಿ ಓಡಾಡಿದಂತಿರಲಿಲ್ಲ. ಕರಮಚಂದನ ಗಮನ ಮತ್ತೆ ಗೋಡೆಯೆಡೆಗೆ ಸರಿಯಿತು.

"ಬಿದ್ದಪ್ಪ, ಇಲ್ನೋಡು, ಹೆಜ್ಜೆ ಗುರುತು. ನೆಲದ ಮೇಲಿರುವ ಹೆಜ್ಜೆಗೆ ತಾಳೆಯಾಗುತ್ತದೆ. ನಮ್ಮ ಊಹನೆ ಸರಿ. ವ್ಯಕ್ತಿಯೋರ್ವ ಹಗ್ಗದ ಸಹಾಯದಿಂದ ಗೋಡೆಯ ಮೇಲೆ ಹೆಜ್ಜೆಯೂರಿ ಬಾಲ್ಕನಿ ಏರಿದ್ದಾನೆ."

ಗೋಡೆಯ ಮೇಲಿದ್ದ ಹೆಜ್ಜೆ ಗುರುತುಗಳು ಮಸುಕಾಗಿದ್ದರೂ, ಗುರುತಿಸುವಷ್ಟು ಸ್ಫುಟವಾಗಿದ್ದವು. ಆ ಹೆಜ್ಜೆಯ ಮಾಲೀಕನಾರು?

"ಸೆಕ್ಯುರಿಟಿಯವನಲ್ಲಿ ವಿಚಾರಿಸುವ. ಬಹಳ ಮಂದಿ ಈ ಭಾಗಕ್ಕೆ ಬಂದಂತಿಲ್ಲ. ಹಾಗಾಗಿ, ಇತ್ತ ಬಂದವರನ್ನು ಆತ ಗಮನಿಸಿದ್ದಿರುವ ಸಾಧ್ಯತೆಯಿದೆ." ಸೆಕ್ಯುರಿಟಿಯವನು ನಮ್ಮ ಪ್ರಶ್ನೆ ಕೇಳಿ ಮುಖ ಕಿವಿಚಿದ.

"ನಾನು ನೋಡಿಲ್ಲ, ಸಾರ್. ನಮ್ ಜನಕ್ಕೆ ಬುದ್ಧಿ ಇಲ್ಲ. ಸರಿಯಾಗಿ ಪಾರ್ಕಿಂಗ್ ಮಾಡೋಕೆ ಗೊತ್ತಿಲ್ಲ. ಅವರನ್ನು ಸುಧಾರಿಸುವುದರಲ್ಲೇ ಸಾಕಾಗುತ್ತೆ. ನೀವೇ ಆಗ ನೋಡಿದ್ರಲ್ಲ. ಇನ್ನು, ಈ ಕಡೆ ಯಾರು ಹೋಗಿದ್ದಾರೆ ಅಂತ ನೋಡೋದು ಹೇಗೆ?" ಆತ ತನ್ನ ಸಮಸ್ಯೆ ಹೇಳಿಕೊಂಡ.

"ಸ್ವಲ್ಪ ನೆನಪು ಮಾಡಿಕೊಂಡು ಹೇಳು. ಯಾರಾದರೂ ಇತ್ತ ಕಡೆ ಹಗ್ಗವೊಂದನ್ನು ಹಿಡಿದುಕೊಂಡು ಹೋಗಿದ್ದನ್ನು ಕಂಡಿದ್ದೀಯಾ?" ಕರಮಚಂದ ಒತ್ತಾಯಿಸಿದ.

ತಲೆ ಕೆರೆದುಕೊಂಡ ಆತ ಪದ ಜೋಡಿಸಿದ,

"ಹಗ್ಗ! ನೆನಪಾಯ್ತು... ಒಬ್ಬರು ಹಗ್ಗ ಇದೆಯಾ ಅಂತ ವಿಚಾರಿಸಿದ್ದರು. ನಾನು ಇಲ್ಲವೆಂದಾಗ ಹತ್ತಿರದಲ್ಲಿ ಎಲ್ಲಾದರೂ ಸಿಗುತ್ತೋ ಅಂತ ಕೇಳಿದ್ರು. ನಾನು ಅವರಿಗೆ ಅಂಗಡಿ ತೋರಿಸಿದೆ. ಆದರೆ, ಅವರು ಹಗ್ಗ ಹಿಡಿದುಕೊಂಡು ಈ ಕಡೆ ಹೋಗಿದ್ದನ್ನು ಕಂಡಿಲ್ಲ."

"ಯಾರು ಆ ವ್ಯಕ್ತಿ?"

"ಎತ್ತರದ ತೆಳ್ಳಗಿನ ಕಪ್ಪನೆಯ ಆಸಾಮಿ. ಗೀರುಗಳುಳ್ಳ ಬಿಳಿ ಷರಟು ಧರಿಸಿದ್ದ."

ಸೆಕ್ಯುರಿಟಿಯ ವಿವರಣೆಗೆ ತಾಳೆಯಾಗುವ ಆಸಾಮಿಯನ್ನು ಹುಡುಕುವುದು ನಮಗೆ ಸಮಸ್ಯೆಯೇ ಆಗಿರಲಿಲ್ಲ. ಯಾಕೆಂದರೆ, ತುಸು ಹೊತ್ತಿನ ಮುಂಚೆಯಷ್ಟೇ ನಾವು ಆತನ ಜೊತೆ